ವಿಷಯದಲ್ಲಿ ರಾಹುಲ್ ಇನ್ನೂ ಸುಧಾರಿಸಬೇಕು ಎನ್ನುವುದು ಚುಟುಕು ಕ್ರಿಕೆಟ್ ಜಾಯಮಾನದ ವಿಷಯದಲ್ಲಿ ಸತ್ಯವೇ ಇರಬಹುದು. ಆದರೂ ಒಬ್ಬ ಆಟಗಾರನಾಗಿ ರಾಹುಲ್ ಪಥವನ್ನು ನೋಡಿದರೆ ಅವರಿಗೆ ಕಹಿಯನ್ನು ಪದೇ ಪದೇ ಉಂಡ ಅನುಭವ ಇರುವುದು ಸ್ಪಷ್ಟವಾಗುತ್ತದೆ.

ಹೆಚ್ಚೇನೂ ಹಿಂದೆ ಅಲ್ಲ, 2019ರಲ್ಲಿ ರಾಹುಲ್ ಮನಸ್ಸಿನಲ್ಲಿ ಗೊಂದಲದ ಜೇನುಗೂಡು ಕಟ್ಟಿಕೊಂಡಿತ್ತು. 'ರಾಹುಲ್ ಕಳಪೆ ಫಾರ್ಮ್ ನಡುವೆಯೂ ಕರ್ನಾಟಕಕ್ಕೆ 123 ರನ್‌ಗಳ ಗೆಲುವು' ಎಂಬರ್ಥದ ಶೀರ್ಷಿಕೆಯನ್ನು ಮಾಧ್ಯಮದಲ್ಲಿ ಕಂಡು ಅವರು ಕಲ್ಲವಿಲಗೊಂಡಿರಲಿಕ್ಕೆ ಸಾಕು. ವಿಜಯ್ ಹಜಾರೆ ಟ್ರೋಫಿ ಎಲೈಟ್ 'ಎ' ಗುಂಪಿನ ಪಂದ್ಯದ ನಂತರ ಮೂಡಿಬಂದಿದ್ದ ಶೀರ್ಷಿಕೆ ಅದು. ಅದಕ್ಕೂ ತುಸು ಮೊದಲು ನಡೆದಿದ್ದ ಟ್ವೆಂಟಿ20 ಕ್ರಿಕೆಟ್ ಸರಣಿಯಲ್ಲಿ ದಕ್ಷಿಣ ಆಫ್ರಿಕಾ ಎದುರು ಭಾರತ 1–1ರ ಸಮಬಲ ಸಾಧಿಸಿತು. ಆಗಲೂ ರಾಹುಲ್ ಫಾರ್ಮ್ ಕಳೆದುಕೊಂಡಿದ್ದರು. ಅದಾದ ಮೇಲೆ ಟೆಸ್ಟ್ ಸರಣಿಗೆ ಆಯ್ಕೆಯಾದ ತಂಡದಲ್ಲೂ ಅವರ ಹೆಸರು ಇರಲಿಲ್ಲ.

ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ಆಸ್ಟ್ರೇಲಿಯಾ ಎದುರು ತಾವು ಆಡಿದ ಮೊದಲ ಟೆಸ್ಟ್ ಪಂದ್ಯದಲ್ಲಿಯೇ ಶತಕ ಗಳಿಸಿದ್ದವರು ರಾಹುಲ್. ಮುರಳಿ ವಿಜಯ್ ನಂತರ ತೆರವಾಗಿದ್ದ ಸ್ಥಾನವನ್ನು ಸಮರ್ಥವಾಗಿ ಅವರು ತುಂಬಿದ್ದ ಘಟ್ಟ ಅದು.

ಹಾಗೆ ನೋಡಿದರೆ, ರಾಹುಲ್ ಪಕ್ಕಾ ಚುಟುಕು ಕ್ರಿಕೆಟ್ ಬ್ಯಾಟ್ಸ್‌ಮನ್ ಅಲ್ಲ. ಒಂದು ಕಡೆ ವಿಕೆಟ್ ಬೀಳತೊಡಗಿದರೆ, ಅವರು ತಾಳ್ಮೆಯಲ್ಲಿ ಅದ್ದಿ ತೆಗೆದಂತೆ ನಿಂತುಬಿಡುತ್ತಾರೆ. ರಾಹುಲ್ ದ್ರಾವಿಡ್ ಅವರದ್ದೇ ಕಾರ್ಯತಂತ್ರ ಇದು. ಹೀಗೆ ಮಾಡುವಾಗ ತಂಡ ಅತಿ ಕಡಿಮೆ ಮೊತ್ತಕ್ಕೆ ಕುಸಿಯುವುದು ತಪ್ಪುತ್ತದೆ ಎನ್ನುವುದು ಕ್ರಿಕೆಟ್‌ನ ಮೂಲಪಾಠಗಳಲ್ಲಿ ಒಂದಾಗಿತ್ತು.

ರಾಹುಲ್ ದ್ರಾವಿಡ್ ಅವರ ಸಹಿ ಹಾಕಿದಂತಹ ಕವರ್‌ಡ್ರೈವ್‌ಗಳನ್ನು ನೋಡಿ ಬೆಳೆದ ಹುಡುಗರಲ್ಲಿ ರಾಹುಲ್ ಕೂಡ ಒಬ್ಬರು. ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಅಭ್ಯಾಸ ಮಾಡುವಾಗಲೇ ಅವರು ಆಕ್ರಮಣ–ಸಂಯಮ ಬೆರೆಸಿದಂತಹ ಶೈಲಿಯನ್ನು ರೂಢಿಸಿಕೊಳ್ಳುವ ಉಮೇದು ತೋರಿಸಿದ್ದರು.

2016ರಲ್ಲಿ ರಾಹುಲ್ ಏಳು ಟೆಸ್ಟ್ ಪಂದ್ಯಗಳನ್ನು ಆಡಿ 599 ರನ್ ಕಲೆಹಾಕಿದ್ದರು. ಸರಾಸರಿ 59.88. ಅವರ ಟೆಸ್ಟ್ ಆಟದ ಇನಿಂಗ್ಸ್‌ನ ವೈಯಕ್ತಿಕ ಗರಿಷ್ಠ ಸ್ಕೋರ್ 199 ರನ್ ದಾಖಲಾದದ್ದೂ ಅದೇ ವರ್ಷ. ಅದರ ಮರು ವರ್ಷವೂ ಆಸ್ಟ್ರೇಲಿಯಾ, ಶ್ರೀಲಂಕಾ ಎದುರು ಅವರ ಫಾರ್ಮ್ ಮುಂದುವರಿದಿತ್ತು. 9 ಪಂದ್ಯಗಳಲ್ಲಿ 9 ಅರ್ಧಶತಕಗಳು ದಾಖಲಾಗಿದ್ದವು.

ಆ ಸಂದರ್ಭದಲ್ಲಿ ರಾಹುಲ್ ಅವರನ್ನು ಇಕ್ಕಟ್ಟಿಗೆ ಸಿಲುಕಿಸುವ ತಂತ್ರವೊಂದನ್ನು ಎದುರಾಳಿ ಬೌಲರ್‌ಗಳು ಹುಡುಕಿಕೊಂಡಿದ್ದರು. ಬಲಗೈ ವೇಗಿಗಳ ಎಸೆತಗಳಲ್ಲಿ ರಾಹುಲ್ 2018ರಲ್ಲಿ ಶೇ.70ರಷ್ಟು ಬಾರಿ ಔಟಾಗಿದ್ದರು. ಬ್ಯಾಟ್ ಅಂಚಿಗೆ ಚೆಂಡು ಬಡಿದು, ವಿಕೆಟ್ ಕೀಪರ್ ಕೈಗೆ ಹೋದದ್ದು ಅಥವಾ ಗಲ್ಲಿ ಫೀಲ್ಡಿಂಗ್ ಪೊಸಿಷನ್ ಬಳಿ ಕ್ಯಾಚ್ ಆದದ್ದೇ ಹೆಚ್ಚು. ಅದಕ್ಕೂ ಮೊದಲು ಸತತ 17 ಟೆಸ್ಟ್‌ಗಳಲ್ಲಿ ಅರ್ಧಶತಕಗಳನ್ನು ದಾಖಲಿಸುತ್ತಾ ಬಂದಿದ್ದ ರಾಹುಲ್ ನೋಡನೋಡುತ್ತಲೇ ತಡಬಡಾಯಿಸತೊಡಗಿದ್ದರು.

ವೀರೇಂದ್ರ ಸೆಹ್ವಾಗ್ ಅವರು ಆಫ್‌ಸ್ಟಂಪ್‌ನ ಆಚೆ ನುಗ್ಗುವ ಚೆಂಡುಗಳನ್ನು ಫೀಲ್ಡರ್‌ಗಳ ತಲೆಮೇಲೆ ಹೊಡೆಯುವ ತಂತ್ರವೊಂದನ್ನು ಅಳವಡಿಸಿಕೊಂಡಿದ್ದರು. ಚೆಂಡು ಬ್ಯಾಟ್‌ನ ಮೇಲಿನ ಅಂಚಿಗೆ ಬಡಿದರೂ ಅದು ಚಿಮ್ಮಿ ಸಾಗುತ್ತಿತ್ತು. ಸೆಹ್ವಾಗ್ ಕುಳ್ಳಗಿನ ದೇಹಕ್ಕೂ ಆ ತಂತ್ರಕ್ಕೂ ಒಂದು ಸಾವಯವ ಸಂಬಂಧ ಇತ್ತು. ರಾಹುಲ್ ಅದೇ ತಂತ್ರವನ್ನು ಬೇರೆ ರೀತಿ ಅನುಷ್ಠಾನಕ್ಕೆ ತಂದರು. ಅವರು ಆಫ್‌ಸ್ಟಂಪ್‌ನ ಆಚೆ ಹೋಗುವ ಚೆಂಡನ್ನು ಹೆಚ್ಚಾಗಿ ನೆಲಕ್ಕೆ ಹೊಡೆಯುವ ಶೈಲಿಯನ್ನು ರೂಢಿಸಿಕೊಂಡಿದ್ದಾರೆ. ಸ್ಪಿನ್ನರ್‌ಗಳಿಗಂತೂ ಕೊನೆಯ ಕ್ಷಣದಲ್ಲಿ ಅವರು ಕಟ್ ಮಾಡುವ ವೈಖರಿ ನೋಡಲು ಎರಡು ಕಣ್ಣು ಸಾಲದು.

ಕುಸಿದ ಸಂದರ್ಭದಲ್ಲಿಯೂ ರಾಹುಲ್ ತಮ್ಮ ಆಟದಲ್ಲಿ ಬದಲಾವಣೆ ತಂದುಕೊಳ್ಳಲು ಯಾವತ್ತೂ ಹಿಂದೇಟು ಹಾಕಿದವರಲ್ಲ. ಚುಟುಕು ಕ್ರಿಕೆಟ್ ಆಟದಿಂದಾಗಿಯೇ ಅವರ ಆಟ ಹಾಳಾಗಿದೆ ಎಂದು ಭಾರತದ ಮಾಜಿ ಆರಂಭಿಕ ಆಟಗಾರ ಚೇತನ್ ಚೌಹಾನ್ ಹಿಂದೊಮ್ಮೆ ಟೀಕೆ ಮಾಡಿದ್ದರು.

ಕೋವಿಡ್‌ಗೂ ಹಿಂದಿನ ವರ್ಷ ಕಳೆದುಕೊಂಡಿದ್ದ ಫಾರ್ಮ್ ಅನ್ನು ರಾಹುಲ್ ಮರಳಿ ಪಡೆದದ್ದು ಚುಟುಕು ಕ್ರಿಕೆಟ್‌ನಲ್ಲೇ. ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ವೆಸ್ಟ್‌ಇಂಡೀಸ್ ವಿರುದ್ಧ ನಡೆದ ಟ್ವೆಂಟಿ20 ಅಂತರರಾಷ್ಟ್ರೀಯ ಪಂದ್ಯದಲ್ಲಿ ಅವರು 56 ಎಸೆತಗಳಲ್ಲಿ 91 ರನ್ ಸೇರಿಸಿದ್ದರು. 9 ಬೌಂಡರಿ, 4 ಸಿಕ್ಸರ್‌ಗಳ ಇನಿಂಗ್ಸ್ ಅದಾಗಿತ್ತು.

ಆ ಇನಿಂಗ್ಸ್ ನೋಡಿದ ಮೇಲೆ ಭಾರತದ ಮತ್ತೊಬ್ಬ ಮಾಜಿ ಆಟಗಾರ ವಾಸಿಂ ಜಾಫರ್, ಇಂತಹ ಆಟಗಾರ ಮಾನಸಿಕವಾಗಿ ಪರದಾಡಬಾರದು ಎಂದು ಕಾಳಜಿಯ ಮಾತನ್ನಾಡಿದ್ದರು.

ಈಗ ಎಲ್‌ಎಸ್‌ಜಿ ತಂಡದ ಸಹಾಯಕ ಕೋಚ್ ಲಾನ್ಸ್ ಕ್ಲುಸ್ನರ್ ಅದೇ ಅರ್ಥದ ಮಾತನ್ನು ರಾಹುಲ್ ವಿಷಯದಲ್ಲಿ ಆಡಿದ್ದಾರೆ. ಮಾಲೀಕರು ಭಾವಾವೇಶದಿಂದ ಮಾತನಾಡಿರುವುದು ಕ್ರಿಕೆಟ್ ಪ್ರೀತಿಯಿಂದ ಇದ್ದಿರಬಹುದು. ರಾಹುಲ್ ಸಂಕಷ್ಟದ ಸ್ಥಿತಿಯಲ್ಲಿಯೂ ಚೆನ್ನಾಗಿ ಆಡುತ್ತಾರೆ. ಅದನ್ನು ಗೌರವಿಸಬೇಕು ಎಂಬ ಲಾಸ್ನರ್ ಮಾತಿನಲ್ಲಿ ಹುರುಳಿದೆ. ಕ್ರಿಕೆಟ್‌ನ ಸಾಂಪ್ರದಾಯಿಕ ಸುಖಗಳನ್ನೆಲ್ಲ ಫಿನಾಯಿಲ್ ಹಾಕಿ ತೊಳೆಯುತ್ತಿರುವ ಐಪಿಎಲ್ ಕುರಿತು ಬೇಸರ ಇನ್ನಷ್ಟು ಹೆಚ್ಚಾಗುವುದು ರಾಹುಲ್ ಅವರಂತಹ ಹದಿನಾರಾಣೆ ಪ್ರತಿಭೆ ಪದೇ ಪದೇ ಇಂತಹ ಅಗ್ನಿಪರೀಕ್ಷೆಗಳನ್ನು ಎದುರಿಸುವುದನ್ನು ಕಂಡಾಗ.

ಪ್ರತಿಕ್ರಿಯಿಸಿ: feedback@sudha.co.in

